**ದಿನಾಂಕ: 24-10-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಲ್.ಎಂ.ಜಿ. ವಕೀಲರಿಂದ**

1. ನಾನು ಒಕ್ಕಲುತನ ಮಾಡುತ್ತೇನೆ. ನೀವು ಒಕ್ಕಲುತನ ಬಿಟ್ಟು ಬೇರೆ ಏನಾದರೂ ಮಾಡುತ್ತೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಎಷ್ಟು ಎಕರೆ ಹೊಲ ಇದೆ ಎಂದರೆ 10 ಎಕರೆ ಇದೆ. ಪ್ರತಿವಾದಿಯ ಸರ್ವೆ ನಂಬರ್ ಏನು ಇದೆ ಎಂದರೆ 176/1 ಇರುತ್ತದೆ. ಅದರ ವಿಸ್ತೀರ್ಣ ಎಷ್ಟು ಇದೆ ಎಂದರೆ 5 ಎಕರೆ 6 ಗುಂಟೆ ಎಂದು ಉತ್ತರಿಸುತ್ತಾರೆ. ಜುಲೈ 3ನೇ ವಾರ 2020 ರಲ್ಲಿ ಪ್ರತಿವಾದಿಯು ಹೊಲವನ್ನು ಮಾರಾಟ ಮಾಡುತ್ತೇನೆ ಎಂದು ನಿಮ್ಮ ಹತ್ತಿರ ಬಂದು ಕೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹೊಲ ಮಾರಾಟ ಮಾಡಲು ಪ್ರತಿವಾದಿಗೆ ಏನು ತಾಪತ್ರಯ ಇತ್ತು ಎಂದು ನಿಮ್ಮ ದಾವೆಯಲ್ಲಿ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಜುಲೈ-2020 ರಲ್ಲಿ ಬಂದು ನಿಮಗೆ ಭೇಟಿ ಆಗಿದ್ದರು ಎಂದು ಹೇಳುತ್ತಿದ್ದೀರಿ ನಿಖರವಾಗಿ ಯಾವ ದಿನಾಂಕ ಬಂದಿದ್ದರು ಎಂದು ಹೇಳಲು ಬರುತ್ತಾ ಎಂದರೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ.

2. ಪ್ರತಿ ಎಕರೆಗೆ ಎಷ್ಟು ಮಾತುಕತೆ ಆಯಿತು ಎಂದರೆ ಐದೈದು ಲಕ್ಷ ಎಂದು ಉತ್ತರಿಸುತ್ತಾರೆ. ಪ್ರತಿ ಎಕರೆಗೆ 5 ಲಕ್ಷ ಎಂದರೆ 25 ಲಕ್ಷ ಮಾಡಿರುವುದು ತಪ್ಪಾಗುತ್ತದೆ ಎಂದರೆ 25 ಲಕ್ಷ ಹೇಳಿದ್ದರು 24 ಲಕ್ಷ ರೂಪಾಯಿ ಕೊಟ್ಟಿದ್ದೆ 1 ಲಕ್ಷ ರೂಪಾಯಿ ರಜಿಸ್ಟರ್ ಸಮಯದಲ್ಲಿ ಕೊಡುತ್ತೇನೆ ಎಂದು ಹೇಳಿದ್ದೆ ಎಂದು ಉತ್ತರಿಸುತ್ತಾರೆ. ಪ್ರತಿ ಎಕರೆಗೆ 5 ಲಕ್ಷಕ್ಕೆ ಮಾತುಕತೆ ಆಗಿದೆ ಎಂದು ನಿಮ್ಮ ವಾದಪತ್ರದಲ್ಲಾಗಲೀ ಸಾಕ್ಷಿ ಪ್ರಮಾಣ ಪತ್ರದಲ್ಲಾಗಲೀ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ವಾದಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಒಟ್ಟಿಗೆ 24 ಲಕ್ಷ ರೂಪಾಯಿ ಕೊಟ್ಟಿದ್ದೇವೆ ಎಂದು ಬರೆದಿದ್ದೀರಿ ಆದರೆ ಖರೀದಿ ಕರಾರು ಪತ್ರದಲ್ಲಿ ಕಂತಿನ ರೂಪದಲ್ಲಿ ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದೀರಿ ಅದರಲ್ಲಿ ಯಾವುದು ಸತ್ಯ ಇದೆ ಎಂದರೆ ಒಂದೇ ಸಲ ಕೊಟ್ಟಿರುವುದು ಸತ್ಯ ಇದೆ ಎಂದು

ಉತ್ತರಿಸುತ್ತಾರೆ. ಅಗ್ರಿಮೆಂಟ್ ಸಮಯದಲ್ಲಿ ಕಂತು ಪ್ರಕಾರ ಕೊಟ್ಟಿರುವುದು ಸುಳ್ಳು ಇದೆ ಎಂದರೆ 24 ಲಕ್ಷ ಒಂದೇ ಸಲ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ.

3. 24 ಲಕ್ಷ ರೂಪಾಯಿ ಯಾವ ರೀತಿ ಕೊಟ್ಟಿದ್ದೀರಿ ಎಂದರೆ ನಗದು ರೂಪದಲ್ಲಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಆ ದಿನ ನಿಮ್ಮ ಹತ್ತಿರ 24 ಲಕ್ಷ ರೂಪಾಯಿ ಇತ್ತು ಎಂದು ತೋರಿಸಲು ಕಾಗದ ಏನಾದರೂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. 24 ಲಕ್ಷ ರೂಪಾಯಿಗಳಲ್ಲಿ ಯಾವ ಯಾವ ಮುಖ ಬೆಲೆಯ ನೋಟುಗಳು ಇದ್ದವು ಎಂದರೆ 500 ಮುಖಬೆಲೆಯ 48 ಕಟ್ಟುಗಳು ಇದ್ದವು ಎಂದು ಉತ್ತರಿಸುತ್ತಾರೆ. ಸದರಿ 24 ಲಕ್ಷ ರೂಪಾಯಿ ನಿಮ್ಮ ಹತ್ತಿರ ಯಾವ ಮೂಲದಿಂದ ಬಂದಿತು ಎಂದು ನಿಮ್ಮ ವಾದಪತ್ರದಲ್ಲಿ ಹೇಳಿಲ್ಲ ಎಂದರೆ 5-6 ವರ್ಷಗಳಿಂದ ಕೂಡಿಟ್ಟ ಹಣ ಎಂದು ಉತ್ತರಿಸುತ್ತಾರೆ. 5-6 ವರ್ಷಗಳಿಂದ ಕೂಡಿಟ್ಟ ಹಣ ಎಂದು ನಿಮ್ಮ ವಾದಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಪ್ರತಿವಾದಿಗೆ ಎಷ್ಟು ಸಲ ಭೇಟಿ ಆಗಿದ್ದೀರಿ ಎಂದು ನಿಮ್ಮ ವಾದಪತ್ರದಲ್ಲಿ ಬರೆದಿಲ್ಲ ಎಂದರೆ ನಾನು ಭೇಟಿಯಾಗಿದ್ದೆ ಆದರೆ ಬರೆಸಿಲ್ಲ ಎಂದು ಉತ್ತರಿಸುತ್ತಾರೆ. ಯಾವ ಯಾವ ದಿನಾಂಕದಂದು ಮತ್ತು ಯಾರ ಸಮ್ಮುಖದಲ್ಲಿ ಭೇಟಿ ಆಗಿದ್ದೀರಿ ಎಂದು ನಿಮ್ಮ ವಾದಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ನೀವು ಅವರಿಗೆ ಹೋಗಿ ಭೇಟಿ ಆಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಕೋವಿಡ್ ನ 2ನೇ ಅಲೆ ಇತ್ತು ಎಂದು ಹೇಳಲು ಬರುತ್ತಾ ಎಂದರೆ ದಿನಾಂಕ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಯಾವ ವರ್ಷದಂದು ಭೇಟಿ ಆಗಿದ್ದೀರಿ ಎಂದರೆ 2021-22 ರಲ್ಲಿ ಎಂದು ಉತ್ತರಿಸುತ್ತಾರೆ. ಅದಾದ ನಂತರ ಪ್ರತಿವಾದಿಯು ಸೇಲ್ ಡೀಡನ್ನು ಮಾಡಿಕೊಡಲು ಮುಂದೂಡುತ್ತಾ ಇದ್ದಳು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮೆ-2023 ರಲ್ಲಿ ನೀವು ಅವರಿಗೆ ಹೋಗಿ ಭೇಟಿ

ಆಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸ್ಕೆಚ್ ಮ್ಯಾಪ್ ಮಾಡಿಲ್ಲ ಎಂದು ಅವರಿಗೆ ಪ್ರಶ್ನೆ ಮಾಡಿದ್ದೇನೆ ಎಂದು ಹೇಳುತ್ತಿದ್ದೀರಿ ಯಾವ ದಿನಾಂಕ ಎಂದು ನಿಮ್ಮ ವಾದಪತ್ರದಲ್ಲಿ ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ಜಮೀನನ್ನು ಕಬಳಿಸುವ ಉದ್ದೇಶದಿಂದ ವಕೀಲರ ಮುಖಾಂತರ ಅವರಿಗೆ ನೋಟಿಸ್ ಕಳಿಸಿದ್ದೀರಿ ಎಂದರೆ ಸರಿಯಲ್ಲ. ಹೊಲವನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿದುಬಂತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅವರು ಯಾರಿಗೆ ಹೊಲವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಹೊಲವನ್ನು ಇಲ್ಲಿಯವರೆಗೆ ಪ್ರತಿವಾದಿ ಮಾರಾಟ ಮಾಡಿಲ್ಲ ಸದರಿ ಹೊಲ ಅವರ ಹೆಸರಿನಲ್ಲೇ ಇದೆ ಎಂದರೆ ಸರಿ. ನೀವು ಸುತ್ತಮುತ್ತಲಿನ ಹೊಲಗಳನ್ನು ಲೀಜ್ ಮೇಲೆ ತೆಗೆದುಕೊಂಡು ಕೆಲಸಗಳನ್ನು ಮಾಡಿಸುತ್ತೀರಿ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯ ಹೊಲವನ್ನು 18 ಲಕ್ಷಕ್ಕೆ ಲೀಜ್ ಮೇಲೆ ತೆಗೆದುಕೊಂಡು ಹೊಲವನ್ನು ಸಾಗುವಳಿ ಮಾಡುತ್ತೇವೆ ಎಂದು ಒಪ್ಪಿಸಿಕೊಂಡಿದ್ದೀರಿ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. 18 ಲಕ್ಷಕ್ಕೆ ಲೀಜ್ ಮಾಡಿಕೊಡುತ್ತೇನೆ ಎಂದು ಜೇವರ್ಗಿಯ ಸಬ್ ರಿಜಿಸ್ಟ್ರಾರ್ ಗೆ ಕರೆಯಿಸಿ ಮೋಸದಿಂದ ಖರೀದಿ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದೀರಿ ಎಂದರೆ ಇಲ್ಲ ಎಂದು ಉತ್ತರಿಸಿ ಅವರೇ ಬಂದು ಕೇಳಿದ ಮೇರೆಗೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗೆ ವಯಸ್ಸಾಗಿದೆ ಅವಳು ಅನಕ್ಷರಸ್ಥೆ ಇರುವ ದುರ್ಲಾಭವನ್ನು ಪಡೆದುಕೊಂಡು ಮಾರಾಟ ಕರಾರು ಪತ್ರ ಮಾಡಿಕೊಂಡಿದ್ದೀರಿ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

5. 18 ಲಕ್ಷ ರೂಪಾಯಿ ಅವರಿಗೆ ಕೊಟ್ಟಿದ್ದೀರಿ ಅವರು 18 ಲಕ್ಷ ರೂಪಾಯಿ ವಾಪಾಸ್ ಕೊಡಲು ತಯಾರು ಇದ್ದಾರೆ ಎಂದರೆ ಖರೀದಿ ಹೊಲ ಬೇಕು ಎಂದು ಉತ್ತರಿಸುತ್ತಾರೆ. ದುರಾಸೆಗೆ ಒಳಪಟ್ಟು ಅವರಿಗೆ ಮೋಸ ಮಾಡಿದ್ದೀರಿ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಮಾರಾಟ ಕರಾರು ಪತ್ರದಲ್ಲಿ 24 ಲಕ್ಷ ಎಂದು ಸುಳ್ಳು ಬರೆಸಿದ್ದೀರಿ ಎಂದರೆ

ಸರಿಯಲ್ಲ. ಆ ದಿನ ನಿಮ್ಮ ಹತ್ತಿರ 24 ಲಕ್ಷ ರೂಪಾಯಿ ಇರಲಿಲ್ಲ ನೀವು ಅವರಿಗೆ 24 ಲಕ್ಷ ರೂಪಾಯಿ ಕೊಟ್ಟಿಲ್ಲ ಎಂದರೆ ಕೊಟ್ಟದ್ದೇನೆ ಎಂದು ಉತ್ತರಿಸುತ್ತಾರೆ. ಅವರ ಹೊಲವನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ